# 2021-22 ನೇ ಸಾಲಿನ ಸೇತುಬಂಧ – ಕಾರ್ಯಕ್ರಮ

## ಬಂಧ - 30 ದಿನಗಳ ಕಲಿವಿನ ಚಟುವಟಿಕೆಗಳು

**ತರಗತಿ : 9 ನೇ** **ವಿಷಯ : ವಿಜ್ಞಾನ**

| ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು. |
|---|---|---|---|
| 1.ಸಸ್ಯ ಮತ್ತು ಪ್ರಾಣಿ ಜೀವಕೋಶವನ್ನು ಅರ್ಥೈಸುವರು, ಚಿತ್ರಿಸುವುದನ್ನು ಕಲಿಯುವರು ಹಾಗೂ ಏಕಕೋಶೀಯ ಮತ್ತು ಬಹುಕೋಶೀಯ ಜೀವಿಗಳನ್ನು ಗುರುತಿಸುವರು. | 1.1.ಜೀವಕೋಶವನ್ನು ಅರ್ಥೈಸುವುದು ಮತ್ತು ಜೀವಕೋಶದ ವಿವಿಧ ಮಾದರಿಗಳನ್ನು ಪರಿಚಯ ಮಾಡುವುದು. | ದಿನ-1.ಬರಿಗಣ್ಣಿಗೆ ಕಾಣದ್ದನ್ನು ನೋಡೋಣ :<br>1. ಸೂಕ್ಷ್ಮದರ್ಶಕದ ಸಹಾಯದಿಂದ ಈರುಳ್ಳಿಯ ಪೊರೆಯಲ್ಲಿನ ಕೋಶೀಯ ರಚನೆಯನ್ನು ವೀಕ್ಷಿಸುವುದು.<br>2. ಜೀವಕೋಶದ ವಿವಿಧ ಮಾದರಿಗಳ ಚಿತ್ರಪಟ ವೀಕ್ಷಿಸುವುದು.<br>3. ಜೀವಿಯ ರಚನೆಯ ಮೂಲ ಘಟಕವನ್ನು ಸ್ಮರಿಸಿ ಚರ್ಚಿಸುವುದು.<br>4. ಸಾಧ್ಯವಾದಲ್ಲಿ ಜೇನುಗೂಡಿನ ರಚನೆಯನ್ನು ವೀಕ್ಷಿಸುವುದು. | ಪ್ರಯೋಗಾಲಯದಲ್ಲಿ ಶಿಕ್ಷಕರ ಸಮ್ಮುಖದಲ್ಲಿ ಸೂಕ್ಷ್ಮದರ್ಶಕದ ಸಹಾಯದಿಂದ ಈರುಳ್ಳಿಯ ಪೊರೆಯಲ್ಲಿನ ಕೋಶೀಯ ರಚನೆಯನ್ನು ವಿದ್ಯಾರ್ಥಿಗಳು ವೀಕ್ಷಿಸಲು ಅನುವು ಮಾಡಿಕೊಡೋಣ. |
| | 1.2.ಸಸ್ಯ ಮತ್ತು ಪ್ರಾಣಿ ಜೀವಕೋಶಗಳನ್ನು ಚಿತ್ರಿಸುವ ಕೌಶಲ ಬೆಳೆಸುವುದು . | ದಿನ-2 : ನೋಡಿದನ್ನು ಚಿತ್ರಿಸಲು ಕಲಿಯೋಣ:<br>1. ಕಪ್ಪು ಹಲಗೆಯ ಮೇಲೆ ಸಸ್ಯ ಮತ್ತು ಪ್ರಾಣಿ ಜೀವಕೋಶಗಳನ್ನು ಚಿತ್ರಿಸುವ ಕೌಶಲ ತಿಳಿಸುವುದು.<br>2. ಸಸ್ಯ ಮತ್ತು ಪ್ರಾಣಿ ಜೀವಕೋಶಗಳ ಚಿತ್ರಪಟವನ್ನು ವೀಕ್ಷಿಸಿ ವಿದ್ಯಾರ್ಥಿಗಳು ಬರೆಯಲು ಪ್ರೇರೇಪಿಸುವುದು. | ಕಪ್ಪುಹಲಗೆಯ ಮೇಲೆ ಸಸ್ಯ ಮತ್ತು ಪ್ರಾಣಿ ಜೀವಕೋಶಗಳನ್ನು ಚಿತ್ರಿಸುವ ಕೌಶಲವನ್ನು ಪ್ರದರ್ಶಿಸಿ ವಿದ್ಯಾರ್ಥಿಗಳು ಕೌಶಲವನ್ನು ಬೆಳಸಿಕೊಳ್ಳಲು ಪ್ರೇರೆಪಿಸೋಣ. |

| | | | |
|---|---|---|---|
| | 1.3. ಏಕಕೋಶೀಯ ಮತ್ತು ಬಹುಕೋಶೀಯ ಜೀವಿಗಳನ್ನು ಅರ್ಥೈಸುವುದು ಮತ್ತು ಉದಾಹರಣೆಗಳು ತಿಳಿಯುವುದು. | ದಿನ-3:<br>1.ಏಕಕೋಶೀಯ ಮತ್ತು ಬಹುಕೋಶೀಯ ಜೀವಿಗಳ ಚಿತ್ರಪಟವನ್ನು ವೀಕ್ಷಿಸುವುದು.<br>2. ಏಕಕೋಶೀಯ ಮತ್ತು ಬಹುಕೋಶೀಯ ಜೀವಿಗಳ ಕುರಿತು ಚರ್ಚೆ.<br>3. ಏಕಕೋಶೀಯ ಮತ್ತು ಬಹುಕೋಶೀಯ ಜೀವಿಗಳ ಹೆಸರುಗಳನ್ನು ಪಟ್ಟಿಮಾಡುವುದು.<br>4. ಏಕಕೋಶೀಯ ಜೀವಿಗಳ ವೀಡಿಯೋ ವೀಕ್ಷಣೆ ಮಾಡುವುದು.<br>5. ತಮ್ಮ ಸುತ್ತಲಿನ ಪರಿಸರದಲ್ಲಿನ ಬಹುಕೋಶೀಯ ಜೀವಿಗಳನ್ನು ಗುರುತಿಸಿ ಪಟ್ಟಿಮಾಡುವುದು. | ವಿದ್ಯಾರ್ಥಿಗಳು ತಮ್ಮ ಸುತ್ತಲಿನ ಪರಿಸರದಲ್ಲಿನ ಜೀವಿಗಳ ಹೆಸರನ್ನು ಪಟ್ಟಿ ಮಾಡಿ ಕೊಂಡು ಬರಲಿ, ಅವುಗಳು ಬಹುಕೋಶೀಯ ಜೀವಿಗಳಾಗಿವೆ ಎನ್ನುವುದನ್ನು ಮನನ ಮಾಡಿಸೋಣ ಮತ್ತು ಏಕಕೋಶೀಯ ಜೀವಿಗಳನ್ನು ಚಿತ್ರಪಟ ಪ್ರದರ್ಶಿಸಿ ಅರ್ಥ ಮಾಡಿಸೋಣ. |
| 2. ಸೂಕ್ಷ್ಮ ಜೀವಿಗಳನ್ನು ಅರ್ಥೈಸುವುದು, ರೋಗಕಾರಕ ಮತ್ತು ಉಪಯುಕ್ತ ಸೂಕ್ಷ್ಮ ಜೀವಿಗಳನ್ನುಗುರುತಿಸಿ ವರ್ಗೀಕರಿಸುವರು. | 2.1. ಸೂಕ್ಷ್ಮ ಜೀವಿಗಳನ್ನು ಅರ್ಥೈಸುವುದು ಮತ್ತು ವಿವಿಧ ಸೂಕ್ಷ್ಮ ಜೀವಿಗಳ ಉದಾಹರಣೆ ತಿಳಿಯುವುದು. | ದಿನ-4.<br>1. ಸೂಕ್ಷ್ಮ ಜೀವಿಗಳ ಚಿತ್ರಪಟ ವೀಕ್ಷಿಸುವುದು.<br>2. ಪ್ರಯೋಗಾಲಯದಲ್ಲಿ ವಿವಿಧ ಸಿದ್ಧ ಸ್ಲೈಡ್ಗಳನ್ನು ವೀಕ್ಷಿಸುವುದು.<br>3. ಸೂಕ್ಷ್ಮ ಜೀವಿಗಳ ವೀಡಿಯೋಗಳನ್ನು ವೀಕ್ಷಿಸುವುದು.<br>4. ಸೂಕ್ಷ್ಮ ಜೀವಿಗಳ ಹೆಸರುಗಳನ್ನು ಪಟ್ಟಿಮಾಡುವುದು. | ಪ್ರಯೋಗಾಲಯದಲ್ಲಿ ಸೂಕ್ಷ್ಮಾಣು ಜೀವಿಗಳ ಸ್ಲೈಡ್ ಗಳನ್ನು ವೀಕ್ಷಿಸಲು ಅವಕಾಶ ಒದಗಿಸಿ ಬರಿಗಣ್ಣಿನಿಂದ ನೋಡಲು ಸಾಧ್ಯವಿಲ್ಲದ ಜೀವಿಗಳನ್ನು ಅರ್ಥೈಸೋಣ ಮತ್ತು ಅವುಗಳನ್ನು ಪಟ್ಟಿಮಾಡಲು ಸಹಕರಿಸೋಣ. |

| | | | |
|---|---|---|---|
| | 2.2.ರೋಗವನ್ನುಂಟು ಮಾಡುವ ಸೂಕ್ಷ್ಮಾಣು ಜೀವಿಗಳನ್ನು ಪರಿಚಯಿಸುವುದು. | ದಿನ- 5.<br>1.ಬರಿಗಣ್ಣಿಗೆ ಕಾಣದ ರೋಗಕಾರಕ ಸೂಕ್ಷ್ಮಜೀವಿಗಳ ಪರಿಚಯ:<br>2.ರೋಗಕಾರಕ ಸೂಕ್ಷ್ಮ ಜೀವಿಗಳ ಚಿತ್ರಪಟ ವೀಕ್ಷಿಸುವುದು.<br>3. ರೋಗಕಾರಕ ಸೂಕ್ಷ್ಮ ಜೀವಿಗಳ ಕುರಿತು ವೀಡಿಯೋಗಳನ್ನು ವೀಕ್ಷಿಸುವುದು.<br>4. ರೋಗಕಾರಕ ಸೂಕ್ಷ್ಮ ಜೀವಿಗಳು ಮತ್ತು ಅವುಗಳು ಉಂಟು ಮಾಡುವ ರೋಗಗಳನ್ನು ಪಟ್ಟಿಮಾಡುವುದು.<br>5. ವಿವಿಧ ರೋಗಗಳ ಹೆಸರನ್ನು ಪಟ್ಟಿಮಾಡಿ ಅವುಗಳಿಗೆ ಕಾರಣವಾದ ಸೂಕ್ಷ್ಮ ಜೀವಿಗಳ ಕುರಿತು ಚರ್ಚಿಸುವುದು. | ವಿವಿಧ ರೋಗಗಳ ಹೆಸರನ್ನು ಪಟ್ಟಿಮಾಡಿ ಅವುಗಳಿಗೆ ಕಾರಣವಾದ ಸೂಕ್ಷ್ಮ ಜೀವಿಗಳ ಕುರಿತು ಚರ್ಚಿಸಿ ಅವುಗಳ ಹೆಸರನ್ನು ಪಟ್ಟಿ ಮಾಡಲು ಪ್ರೇರೆಪಿಸೋಣ ಮತ್ತು ಅವುಗಳ ಚಿತ್ರಪಟ ವೀಕ್ಷಿಸಲು ಅನುವು ಮಾಡಿ ಕೊಡೋಣ . |
| | 2.3.ದೈನಂದಿನ ಜೀವನದಲ್ಲಿ ಉಪಯುಕ್ತವಾದ ಸೂಕ್ಷ್ಮಾಣು ಜೀವಿಗಳನ್ನು ಪರಿಚಯಿಸುವುದು. | ದಿನ- 6. ಬರಿಗಣ್ಣಿಗೆ ಕಾಣದ ಉಪಯುಕ್ತ ಸೂಕ್ಷ್ಮ ಜೀವಿಗಳ ಪರಿಚಯ:<br>1. ಪಯುಕ್ತವಾದ ಸೂಕ್ಷ್ಮ ಜೀವಿಗಳ ಚಿತ್ರಪಟ ವೀಕ್ಷಿಸುವುದು.<br>2. ಉಪಯುಕ್ತವಾದ ಸೂಕ್ಷ್ಮ ಜೀವಿಗಳ ಕುರಿತು ವೀಡಿಯೋಗಳನ್ನು ವೀಕ್ಷಿಸುವುದು.<br>3. ಉಪಯುಕ್ತವಾದ ಸೂಕ್ಷ್ಮ ಜೀವಿಗಳು ಮತ್ತು ಅವುಗಳ ಉಪಯುಕ್ತತೆಯ ಸನ್ನಿವೇಶಗಳನ್ನು ಪಟ್ಟಿಮಾಡಿ ಚರ್ಚಿಸುವುದು. | ಉಪಯುಕ್ತವಾದ ಸೂಕ್ಷ್ಮ ಜೀವಿಗಳು ಮತ್ತು ಅವುಗಳ ಉಪಯುಕ್ತತೆಯ ಸನ್ನಿವೇಶಗಳನ್ನು ಪಟ್ಟಿಮಾಡಿ ಚರ್ಚಿಸೋಣ ಮತ್ತು ಅವುಗಳನ್ನು ಚಿತ್ರಪಟಗಳಲ್ಲಿ ವೀಕ್ಷಿಸಲು ಅನವು ಮಾಡಿಕೊಡೋಣ. |
| 3.ಪರಿಸರ ನಾಶಕ್ಕೆ ಕಾರಣಗಳನ್ನು ವಿಶ್ಲೇಷಿಸುವರು. | 3.1. ಪರಿಸರ ನಾಶಕ್ಕೆ ಕಾರಣಗಳನ್ನು ತಿಳಿಯುವರು. | ದಿನ- 7.<br>1 . ಪರಿಸರ ನಾಶಕ್ಕೆ ಕಾರಣಗಳನ್ನು ಕುರಿತು ಗುಂಪು ಚರ್ಚೆ. | ಪರಿಸರ ನಾಶಕ್ಕೆ ಕಾರಣವಾಗುವ ಸನ್ನಿವೇಶಗಳ ಚಿತ್ರಪಟಗಳನ್ನು ವೀಕ್ಷಿಸಿ,ಪರಿಸರ ನಾಶಕ್ಕೆ ಕಾರಣಗಳನ್ನು ಕುರಿತು ಗುಂಪು ಚರ್ಚೆ ಮಾಡಲು ಅನುವು ಮಾಡಿಕೊಡೋಣ. |

| | | | |
|---|---|---|---|
| ಜಲಮಾಲಿನ್ಯ ಮತ್ತು ವಾಯುಮಾಲಿನ್ಯದ ಬಗ್ಗೆ ವಿವರಿಸುವರು. | | 2. ಪರಿಸರ ನಾಶಕ್ಕೆ ಕಾರಣವಾದ ಸನ್ನಿವೇಶಗಳ ಚಿತ್ರಪಟಗಳನ್ನು ವೀಕ್ಷಿಸುವುದು.<br>3. ಪರಿಸರ ನಾಶಕ್ಕೆ ಕಾರಣಗಳ ಕುರಿತು ಕಿರು ಪ್ರಬಂಧ ಬರೆಸುವುದು.<br>4. ಪರಿಸರ ನಾಶಕ್ಕೆ ಕಾರಣಗಳ ಬಗ್ಗೆ ಭಾಷಣ ಏರ್ಪಡಿಸುವುದು. | |
| | 3.2. ಜಲಮಾಲಿನ್ಯ ಅರ್ಥೈಸುವುದು, ಕಾರಣ ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವರು. | ದಿನ-8.<br>1. ಜಲಮಾಲಿನ್ಯದ ಕುರಿತು ಚರ್ಚೆ.<br>2. ಸ್ಥಳೀಯ ಜಲಮಾಲಿನ್ಯಯುಕ್ತ ಸ್ಥಳ ಭೇಟಿ ಮಾಡುವುದು.<br>3. ಜಲಮಾಲಿನ್ಯದ ಚಿತ್ರಪಟ ವೀಕ್ಷಣೆ.<br><br>ದಿನ -9.<br>1. ಜಲಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳ ಕುರಿತು ಚರ್ಚೆ.<br>2. ಗುಂಪುಗಳಲ್ಲಿ ಜಲಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳನ್ನು ಪಟ್ಟಿಮಾಡಿ ಪ್ರಸ್ತುತಪಡಿಸುವುದು.<br>3. ಜಲಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳ ಚಿತ್ರಪಟ ವೀಕ್ಷಿಸುವುದು.<br>4. ಜಲಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳ ವೀಡಿಯೋ ವೀಕ್ಷಣೆ. | ತಮ್ಮ ಶಾಲೆಯ ಹತ್ತಿರದ ಸ್ಥಳೀಯ ಜಲಮಾಲಿನ್ಯಯುಕ್ತ ಸ್ಥಳ ಭೇಟಿ ಮಾಡಿ ಮಾಲಿನ್ಯವಾದ ನೀರನ್ನು ವೀಕ್ಷಿಸಿ ,ಜಲಮಾಲಿನ್ಯವನ್ನು ಅರ್ಥೈಸಿಕೊಳ್ಳಲು ಸಹಕರಿಸೋಣ.<br><br>2.ಜಲಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳನ್ನು ಪಟ್ಟಿಮಾಡಿ ,ಪ್ರಸ್ತುತಪಡಿಸಲು ಪ್ರೇರೇಪಿಸೋಣ. |
| | 3.3.ವಾಯುಮಾಲಿನ್ಯವನ್ನು ಅರ್ಥೈಸುವುದು,ಕಾರಣ | ದಿನ – 10<br>1. ವಾಯುಮಾಲಿನ್ಯ ಕುರಿತು ಚರ್ಚೆ. | ಶಾಲೆಯ ಹತ್ತಿರದ ರಸ್ತೆಯಲ್ಲಿನ ವಾಹನಗಳು ಹೊರಹಾಕುವ ಹೊಗೆಯ ಪ್ರತ್ಯಕ್ಷ ವೀಕ್ಷಣೆ ಮಾಡಿಸಿ ಮತ್ತು ಇತರೆ ಕಾರಣಗಳನ್ನು |

| | | | |
|---|---|---|---|
| | ಮತ್ತು ಪರಿಣಾಮಗಳು ತಿಳಿಯುವರು. | 2. ಸಾಧ್ಯವಾದಲ್ಲಿ ವಾಯುಮಾಲಿನ್ಯಯುಕ್ತ ಸ್ಥಳ ಭೇಟಿ ಮಾಡುವುದು.<br>3. ವಾಯುಮಾಲಿನ್ಯ ಚಿತ್ರಪಟ ವೀಕ್ಷಣೆ.<br>ದಿನ -11.<br>1. ವಾಯುಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳ ಕುರಿತು ಚರ್ಚೆ.<br>2. ಗುಂಪುಗಳಲ್ಲಿ ವಾಯುಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳನ್ನು ಪಟ್ಟಿಮಾಡಿ ಪ್ರಸ್ತುತಪಡಿಸುವುದು.<br>3. ವಾಯುಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳ ಚಿತ್ರಪಟ ವೀಕ್ಷಿಸುವುದು.<br>4. ವಾಯುಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳ ವೀಡಿಯೋ ವೀಕ್ಷಣೆ. | ಪಟ್ಟಿಮಾಡಿಸುವುದರೊಂದಿಗೆ ವಾಯುಮಾಲಿನ್ಯವನ್ನು ಅರ್ಥೈಸಿಕೊಳ್ಳಲು ಸೂಕ್ತ ಚರ್ಚೆಯನ್ನು ನಡೆಸೋಣ.<br><br>ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ವಾಯುಮಾಲಿನ್ಯಕ್ಕೆ ಕಾರಣ ಮತ್ತು ಪರಿಣಾಮಗಳ ಬಗ್ಗೆ ಚರ್ಚೆ ಮಾಡಿ ಪ್ರಸ್ತುತ ಪಡಿಸಲು ಅವಕಾಶ ಒದಗಿಸೋಣ. |
| 4.ಬೆಳೆಯ ಉತ್ಪಾದನೆಯ ಮೂಲಭೂತ ಪದ್ಧತಿಗಳನ್ನು ತಿಳಿದು ವಿಶ್ಲೇಷಿಸುವರು. | 4.1.ಮಣ್ಣನ್ನುಹದಗೊಳಿಸುವುದು ಮತ್ತು ಬಿತ್ತನೆ ವಿಧಾನ ತಿಳಿಯುವುದು . | ದಿನ-12.<br>1. ಮಣ್ಣನ್ನುಹದಗೊಳಿಸುವ ಮತ್ತು ಬಿತ್ತನೆ ವಿಧಾನದ ಹಂತಗಳನ್ನು ಪಟ್ಟಿಮಾಡುವುದು.<br>2. ಮಣ್ಣನ್ನು ಹದಗೊಳಿಸುವ ಮತ್ತು ಬಿತ್ತನೆ ವಿಧಾನದ ಹಂತಗಳ ಚಿತ್ರಪಟ ಪ್ರದರ್ಶಿಸಿ ಚರ್ಚಿಸುವುದು.<br>3. ಸಾಧ್ಯವಿದ್ದಲ್ಲಿ ರೈತರ ಭೇಟಿ ಮಾಡಿ ಮಾಹಿತಿ ಸಂಗ್ರಹಣೆ ಮಾಡುವುದು. | ಮಣ್ಣನ್ನುಹದಗೊಳಿಸುವ ಮತ್ತು ಬಿತ್ತನೆ ವಿಧಾನದ ಹಂತಗಳ ಚಿತ್ರಪಟ ಪ್ರದರ್ಶಿಸಿ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಹಂತಗಳನ್ನು ಪಟ್ಟಿಮಾಡಲು ಮಾರ್ಗದರ್ಶಿಸೋಣ. |

| | | | |
|---|---|---|---|
| | | 4. ಗ್ರಂಥಾಲಯದಲ್ಲಿ ಲಭ್ಯವಿರುವ 'ಕೃಷಿ ಪದ್ಧತಿಗಳು" ಪುಸ್ತಕಗಳನ್ನು ಓದಲು ಕೊಡುವುದು. | |
| | 4.2. ಗೊಬ್ಬರಗಳ ಬಳಕೆಯ ಮತ್ತು ಸೂಕ್ತ ನೀರಾವರಿ ಪದ್ಧತಿ ಕುರಿತು ಮಾಹಿತಿ ಸಂಗ್ರಹಿಸುವರು. | ದಿನ-13.<br>1. ಗೊಬ್ಬರಗಳ ಬಳಕೆಯ ಮತ್ತು ಸೂಕ್ತ ನೀರಾವರಿ ಪದ್ಧತಿ ಕುರಿತು ಚರ್ಚೆ.<br>2. ಹೊಲದಲ್ಲಿ ಬೆಳೆಗಳಿಗೆ ಉಪಯೋಗಿಸುವ ಗೊಬ್ಬರಗಳ ಹೆಸರನ್ನು ಪಟ್ಟಿ ಮಾಡಲಿ.<br>3. ವಿವಿಧ ನೀರಾವರಿ ಪದ್ಧತಿಯ ಚಿತ್ರಪಟ ವೀಕ್ಷಿಸಿ ಚರ್ಚಿಸುವುದು.<br>4. ಅತಿಯಾದ ಗೊಬ್ಬರಗಳ ಬಳಕೆಯ ಪರಿಣಾಮದ ಕುರಿತು ಭಾಷಣ.<br>5. 'ಕೃಷಿಯಲ್ಲಿ ಉತ್ತಮ ನೀರಾವರಿ ಪದ್ಧತಿ' ಕಿರು ಪ್ರಬಂಧ ಬರೆಸುವುದು. | ರೈತರು ಹೊಲದಲ್ಲಿ ಬೆಳೆಗಳಿಗೆ ಉಪಯೋಗಿಸುವ ಗೊಬ್ಬರಗಳ ಹೆಸರನ್ನು ಪಟ್ಟಿ ಮಾಡಿ. ಆ ಗೊಬ್ಬರಗಳ ಬಳಕೆಯ ಪ್ರಮಾಣದ ಕುರಿತು ಚರ್ಚಿಸಲು ಮಾರ್ಗದರ್ಶಿಸೋಣ.<br>ಹೊಲದಲ್ಲಿ ಬೆಳೆಗಳಿಗೆ ಉಪಯೋಗಿಸುವ ನೀರಾವರಿ ಪದ್ಧತಿಗಳನ್ನು ಪಟ್ಟಿಮಾಡಿ ಅವುಗಳಲ್ಲಿ ಉತ್ತಮ ನೀರಾವರಿ ಪದ್ಧತಿಯ ಕುರಿತು ಚರ್ಚಿಸೋಣ. |
| | 4.3. ಬೆಳೆಯ ರಕ್ಷಣೆ,ಕೊಯ್ಲು ಮತ್ತು ಸಂಗ್ರಹಣೆಯ ವಿಧಾನದ ಮಾಹಿತಿ. | ದಿನ-14.<br>1. ರೈತರು ಬೆಳೆಯ ರಕ್ಷಣೆಯನ್ನು ಮಾಡುವಲ್ಲಿ ಅನುಸರಿಸುವ ಮುನ್ನೆಚ್ಚರಿಕೆ ಕ್ರಮಗಳನ್ನು ಪಟ್ಟಿಮಾಡುವುದು.<br>2. ಬೆಳೆಯ ಕೊಯ್ಲು ಮತ್ತು ಸಂಗ್ರಹಣೆಯ ವಿಧಾನದ ಕುರಿತು ಚರ್ಚೆ ಮಾಡುವುದು. | ರೈತರು ಹೊಲದಲ್ಲಿ ಬೆಳೆಯ ರಕ್ಷಣೆಯಲ್ಲಿ ಉಪಯೋಗಿಸುವ ಕೀಟನಾಶಕಗಳನ್ನು ಕುರಿತು ಮಾಹಿತಿ ಸಂಗ್ರಹಣೆ ಮಾಡಲು ತಿಳಿಸಿ.ಸಂಗ್ರಹಿಸಿದ ಮಾಹಿತಿ ಬಳಸಿ ಸೂಕ್ತ ಚರ್ಚೆ ನಡೆಸೋಣ.<br><br>ವಿದ್ಯಾರ್ಥಿಗಳ ಗುಂಪುಗಳನ್ನು ರಚಿಸಿ ಬೆಳೆಯ ಕೊಯ್ಲು ಮತ್ತು ಧಾನ್ಯ ಸಂಗ್ರಹಣಾ ವಿಧಾನ ಚರ್ಚಿಸಲು ಅವಕಾಶ ಒದಗಿಸೋಣ. |

| | | | |
|---|---|---|---|
| | | 3. ಬೆಳೆಯ ರಕ್ಷಣೆ,ಕೊಯ್ಲು ಮತ್ತು ಸಂಗ್ರಹಣೆಯ ನೂತನ ವಿಧಾನದ ಚಿತ್ರಪಟ ವೀಕ್ಷಿಸುವುದು. | |
| 5.ಮೂಲವಸ್ತು, ಸಂಯುಕ್ತ ವಸ್ತು, ಶುದ್ಧವಸ್ತು ಮತ್ತು ಅಶುದ್ಧವಸ್ತುಗಳ ನ್ನು ಗುರುತಿಸಿ ವರ್ಗೀಕರಿಸುವರು. | 5.1. ಮೂಲವಸ್ತು ಅರ್ಥೈಸುವುದು ಮತ್ತು ದೈನಂದಿನ ಜೀವನದಲ್ಲಿ ಉಪಯೋಗಿಸುವ ಮೂಲವಸ್ತುಗಳ ಹೆಸರು ಮತ್ತು ಸಂಕೇತಗಳನ್ನು ಪಟ್ಟಿಮಾಡುವುದು. | ದಿನ-15.<br>1. ಮೂಲವಸ್ತುಗಳ ಆವರ್ತಕ ಕೋಷ್ಟಕ ಬಳಸಿ ಮೂಲವಸ್ತುಗಳನ್ನು ಅರ್ಥೈಸುವುದು.<br>2. ಮನೆಯಲ್ಲಿರುವ ಮೂಲವಸ್ತುಗಳಿಂದಾದ ಸಂಯುಕ್ತ ವಸ್ತುಗಳನ್ನು ಪಟ್ಟಿಮಾಡುವುದು.<br>3. ನಮ್ಮ ಜೀವನಕ್ಕೆ ಅತ್ಯುಪಯುಕ್ತವಾದ ಮೂಲವಸ್ತುಗಳನ್ನು ಪಟ್ಟಿಮಾಡಿ ಅವುಗಳ ಸಂಕೇತಗಳನ್ನು ಬರೆಯುವುದು. | ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲಿ ಉಪಯೋಗಿಸುವ ಸಂಯುಕ್ತ ವಸ್ತುಗಳನ್ನು ಪಟ್ಟಿ ಮಾಡಿಕೊಂಡು ಬರಲು ತಿಳಿಸಿ ಮತ್ತು ಅದರಲ್ಲಿ ಮೂಲವಸ್ತುಗಳನ್ನು ಗುರುತಿಸಲು ಸಹಕರಿಸಿ,ಅವುಗಳಿಗೆ ರಾಸಾಯನಿಕ ಸಂಕೇತಗಳನ್ನು ಬರೆಯಲು ಪ್ರೇರೇಪಿಸೋಣ. |
| | 5.2. ಸಂಯುಕ್ತ ವಸ್ತುವನ್ನು ಅರ್ಥೈಸುವುದು ಮತ್ತು ದೈನಂದಿನ ಜೀವನದಲ್ಲಿ ಉಪಯೋಗಿಸುವ ಸಂಯುಕ್ತ ವಸ್ತುಗಳ ಹೆಸರು ಮತ್ತು ಅಣುಸೂತ್ರ ಪಟ್ಟಿಮಾಡುವುದು. | ದಿನ-16.<br>1. ದೈನಂದಿನ ಜೀವನದಲ್ಲಿ ಉಪಯೋಗಿಸುವ ಸಂಯುಕ್ತಗಳನ್ನು ಪಟ್ಟಿಮಾಡಿ ಅವುಗಳಲ್ಲಿರುವ ಮೂಲವಸ್ತುಗಳನ್ನು ಹೆಸರಿಸುವುದು.<br>2. ದೈನಂದಿನ ಜೀವನದಲ್ಲಿ ಉಪಯೋಗಿಸುವ ಸಂಯುಕ್ತಗಳನ್ನು ಪಟ್ಟಿಮಾಡಿ ಅವುಗಳಿಗೆ ಅಣುಸುತ್ರ ಬರೆಯುವುದು. | ನೀರು,ಸಕ್ಕರೆ ಮತ್ತು ಉಪ್ಪನ್ನು ತೋರಿಸಿ ಅವುಗಳಲ್ಲಿರುವ ಮೂಲಧಾತುಗಳನ್ನು ಗುರುತಿಸಿ ಹೇಳಲು ಪ್ರೇರೇಪಿಸೋಣ ಮತ್ತು ಅವುಗಳ ಅಣುಸೂತ್ರ ಬರೆಯಲು ಮರ್ಗದರ್ಶಿಸೋಣ. |

| | | | |
|---|---|---|---|
| | | 3. ಸಂಯುಕ್ತ ವಸ್ತುಗಳು ಮತ್ತು ಅವುಗಳ ಉಪಯೋಗ ಕುರಿತು ಚರ್ಚೆ. | |
| | 5.3. ಶುದ್ಧವಸ್ತು & ಅಶುದ್ಧವಸ್ತುಗಳನ್ನು ಅರ್ಥೈಸುವುದು ಮತ್ತು ಉದಾಹರಣೆಗಳನ್ನು ತಿಳಿಯುವುದು. | ದಿನ-17.<br>1. ನಾವು ಉಪಯೋಗಿಸುವ ಮೂಲ ಮತ್ತು ಸಂಯುಕ್ತ ರೂಪದ ಶುದ್ಧ ವಸ್ತುಗಳನ್ನು ಪಟ್ಟಿ ಮಾಡುವುದು.<br>2. ನಾವು ಉಪಯೋಗಿಸುವ ಮಿಶ್ರಣ ರೂಪದ ಅಶುದ್ಧ ವಸ್ತುಗಳನ್ನು ಪಟ್ಟಿ ಮಾಡುವುದು.<br>3. ಶುದ್ಧವಸ್ತು & ಅಶುದ್ಧವಸ್ತುಗಳನ್ನು ಕುರಿತು ಚರ್ಚಿಸುವುದು. | ಕೊಟ್ಟಿರುವ ವಸ್ತುಗಳ ಪಟ್ಟಿಯಲ್ಲಿ ಶುದ್ಧವಸ್ತುಗಳು ಹಾಗೂ ಅಶುದ್ಧ ವಸ್ತುಗಳನ್ನು ಅವುಗಳ ರಾಸಾಯನಿಕ ಸಂಯೋಜನೆಯ ಆಧಾರದ ಮೇಲೆ ವರ್ಗೀಕರಿಸಲು ಸಹಕರಿಸೋಣ.<br>ಉದಾ: ಕಬ್ಬಿಣ ,ನೀರು ಮತ್ತು ಗಾಳಿ ಇತ್ಯಾದಿ. |
| | | ದಿನ-18.<br>1.ಶುದ್ಧ & ಅಶುದ್ಧ ವಸ್ತುಗಳನ್ನು ಪಟ್ಟಿಮಾಡಿಸಿ ಆಲ್ಬಂ ತಯಾರಿಕೆ ಮಾಡುವುದು.<br>2. ಶುದ್ಧ & ಅಶುದ್ಧ ವಸ್ತುಗಳನ್ನು ಪಟ್ಟಿಮಾಡಿಸಿ ಅವುಗಳಲ್ಲಿರುವ ಮೂಲಘಟಕಗಳನ್ನು ಪಟ್ಟಿಮಾಡುವುದು. | ಶುದ್ಧ & ಅಶುದ್ಧ ವಸ್ತುಗಳನ್ನು ಪಟ್ಟಿಮಾಡಿಸಿ .ಆಲ್ಬಂ ತಯಾರಿಕೆ ಮಾಡಲು ಸಹಕರಿಸೋಣ. |
| 6.ಪರಮಾಣು,ಪರಮಾಣು ರಚನೆ ಮತ್ತು ಅಣುಗಳ ರಚನೆಯನ್ನು ಅರ್ಥೈಸಿಕೊಕೊಳ್ಳುವರು | 6.1. ಪರಮಾಣುವನ್ನು ಅರ್ಥೈಸುವುದು ಪರಮಾಣು ರಚನೆಯ ಮಾದರಿಗಳ ಪರಿಚಯ ಮಾಡುವುದು. | ದಿನ-19.<br>1. ಪರಮಾಣು ಮಾದರಿಯ ಚಾರ್ಟ್ ಬಳಸಿ ಪರಮಾಣುವನ್ನು ಅರ್ಥೈಸುವುದು.<br>2. ಕಪ್ಪು ಹಲಗೆಯ ಮೇಲೆ ವಿವಿಧ ಮೂಲವಸ್ತುಗಳ ಪರಮಾಣುಗಳ | • ಪರಮಾಣು ಮಾದರಿಯ ಚಾರ್ಟ್ ಬಳಸಿ ಪರಮಾಣುವಿನ ರಚನೆಯ ಕುರಿತು ಚರ್ಚಿಸೋಣ ಹಾಗೂ ಡ್ರಾಯಿಂಗ್ ಹಾಳೆಯ ಮೇಲೆ ಪರಮಾಣು ಮಾದರಿಯನ್ನು ರಚಿಸುವ ವಿಧಾನವನ್ನು ತಿಳಿಸಿಕೊಟ್ಟು ಮತ್ತು ಮಕ್ಕಳು ರಚಿಸಲು ಸೂಕ್ತ ಮಾರ್ಗದರ್ಶನ ನೀಡೋಣ. |

| | | | |
|---|---|---|---|
| | | ರಚನೆಯನ್ನು ಬರೆಯುವುದು.<br>3. ಡ್ರಾಯಿಂಗ್ ಹಾಳೆಯ ಮೇಲೆ ಪರಮಾಣು ಮಾದರಿಯನ್ನು ಬರೆಯಿಸುವುದು.<br>4. ಪರಮಾಣು ಮಾದರಿಯ ವೀಡಿಯೋಗಳನ್ನು ವೀಕ್ಷಿಸುವುದು. | |
| | 6.2. ಅಣುಗಳ ರಚನೆಯನ್ನು ಅರ್ಥೈಸುವುದು ಮತ್ತು ಉದಾ : $O_2$, $H_2$ | ದಿನ-20.<br>1. ಅಣುಗಳ ರಚನೆಯ ಚಿತ್ರಪಟಗಳನ್ನು ಉಪಯೋಗಿಸಿ ಅಣುವನ್ನು ಅರ್ಥೈಸುವುದು .<br>2. ಕಪ್ಪು ಹಲಗೆಯ ಮೇಲೆ ವಿವಿಧ ವಸ್ತುಗಳ ಅಣು ರಚನೆಯನ್ನು ಬರೆಯುವುದು.<br>3. ಕೆಲವು ಮೂಲ ಮತ್ತು ಸಂಯುಕ್ತ ವಸ್ತುಗಳ ಅಣುಸೂತ್ರ ಪಟ್ಟಿಮಾಡುವುದು.<br>4. ಕೆಲವು ಮೂಲ ಮತ್ತು ಸಂಯುಕ್ತ ವಸ್ತುಗಳ ಅಣುರಚನೆಯ ಕುರಿತು ಚರ್ಚಿಸುವುದು. | ಚಿತ್ರಪಟಗಳು, ವೀಡಿಯೋ, ಪಿಪಿಟಿ ಗಳನ್ನು ಉಪಯೋಗಿಸಿ ಅಣುವನ್ನು ಅರ್ಥೈಸುವುದು ಅಣು ರಚನೆಯ ಮಾದರಿಗಳ ಪರಿಚಯ ಮಾಡಿಸಿ, ವಿವಿಧ ಸಂಯುಕ್ತಗಳ ಅಣುಸೂತ್ರ ಬರೆಯಲು ಸೂಕ್ತ ಮಾರ್ಗದರ್ಶನ ನೀಡೋಣ. |
| 7.ಲೋಹಗಳು ಮತ್ತು ಅಲೋಹಗಳನ್ನು ಗುರುತಿಸುವರು ಮತ್ತು ಇವುಗಳ | 18.ಲೋಹಗಳು ಮತ್ತು ಅಲೋಹಗಳನ್ನು ಪರಿಚಯಿಸುವುದು . | ದಿನ-21.<br>1.ಇದು ಲೋಹವೇ ಅಥವಾ ಅಲೋಹವೇ?<br>2.ವಸ್ತುಗಳ ವೀಕ್ಷಣಾ ಚಟುವಟಿಕೆ<br>3.ಪಟ್ಟಿ ಸಂಗ್ರಹಣೆ | ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲಿ ಉಪಯೋಗಿಸುವ ವಸ್ತುಗಳ ಹೆಸರನ್ನು ಪಟ್ಟಿ ಮಾಡಿಕೊಂಡು ಬರಲು ತಿಳಿಸಿ. ಅವುಗಳಲ್ಲಿ ಲೋಹಗಳು ಮತ್ತು ಅಲೋಹಗಳನ್ನು ವಿಂಗಡಿಸಲು ಸೂಕ್ತ ಮಾರ್ಗದರ್ಶನ ನೀಡೋಣ. |

| | | | |
|---|---|---|---|
| ಭೌತಗುಣಗಳನ್ನು ಗುರುತಿಸಿ ವಿವರಿಸುವರು. | **19.** ಲೋಹಗಳ ಭೌತಗುಣಗಳನ್ನು ಕುರಿತು ಚರ್ಚಿಸುವುದು..ಉದಾ: ತನ್ಯತೆ, ಕುಟ್ಯತೆ ಮುಂತಾದವು | ದಿನ-22.<br>1.ಗುಂಪು ಚಟುವಟಿಕೆ : ಲೋಹಗಳ ಭೌತ ಗುಣಗಳನ್ನು ಪರೀಕ್ಷಿಸಿ ಪಟ್ಟಿಮಾಡೋಣ.<br>2.ಕೋಷ್ಟಕ ರಚನೆ<br>3. ಲೋಹಗಳ ಭೌತ ಗುಣಗಳ ಚರ್ಚೆ | ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲಿ ಇರುವ ತಂತಿ ,ತಗಡು ರೂಪದ ವಸ್ತುಗಳ ಸಂಗ್ರಹಣೆ ಮಾಡಲು ತಿಳಿಸಿ, ತೆಳುವಾದ ತಾಮ್ರದ ತಂತಿಯನ್ನು ಕಾಯಿಸಿ ಶಾಖ ಪ್ರಸರಣಾ ವಿಧಾನವನ್ನು ತಿಳಿಸುವುದು, ಶಾಲೆಯಲ್ಲಿನ ಗಂಟೆಯನ್ನು ಬಾರಿಸುವುದರೊಂದಿಗೆ ಶಾಬ್ದನ ಗುಣವನ್ನು ವಿವರಿಸೋಣ.<br>ವೀಡಿಯೋ,ಚಿತ್ರಪಟ ಅಥವಾ ಪಿಪಿಟಿಗಳನ್ನು ವಿದ್ಯಾರ್ಥಿಗಳು ವೀಕ್ಷಿಸಲು ಅವಕಾಶ ಕಲ್ಪಿಸಿ ಕಲಿಕೆಗೆ ತೊಡಗಿಸೋಣ. |
| | **20,** ಅಲೋಹಗಳ ಭೌತಗುಣಗಳನ್ನು ಪಟ್ಟಿಮಾಡುವರು. | ದಿನ-23.<br>1. ಗುಂಪು ಚಟುವಟಿಕೆ : ಅಲೋಹಗಳ ಭೌತಗುಣಗಳನ್ನುಪಟ್ಟಿಮಾಡುವಿಕೆ.<br>2.ಕೋಷ್ಟಕ ರಚನೆ<br>3. ಅಲೋಹಗಳ ಭೌತಗುಣಗಳ ಚರ್ಚೆ | ವಿದ್ಯಾರ್ಥಿಗಳ ಸಮ್ಮುಖದಲ್ಲಿ ಸೀಸದ ಕಡ್ಡಿಯೊಳಗಿನ ಗ್ರಾಫೈಟ್ ನ್ನು ಕುಟ್ಟಿ ಪುಡಿಯಾಗುವ ಪ್ರಕ್ರಿಯೆಯನ್ನು ವಿವರಿಸಿ. ಬಾರಿಸುವುದರೊಂದಿಗೆ ಶಾಬ್ದನ ಗುಣವು ಇಲ್ಲದಿರುವುದನ್ನು ಲೋಹಗಳೊಂದಿಗೆ ಹೋಲಿಸಿ ತಿಳಿಸೋಣ.<br>ವೀಡಿಯೋ,ಚಿತ್ರಪಟ ಅಥವಾ ಪಿಪಿಟಿ ಗಳನ್ನು ವಿದ್ಯಾರ್ಥಿಗಳು ವೀಕ್ಷಿಸಲು ಅನುಕೂಲಿಸೋಣ. |
| 8.ಬಲ ಮತ್ತು ಒತ್ತಡದ ಪರಿಣಾಮಗಳನ್ನು ಗುರುತಿಸಿ ವಿವರಿಸುವರು. | **21.** ಬಲ ಮತ್ತು ಒತ್ತಡದ ಪರಿಣಾಮಗಳನ್ನು ಗುರುತಿಸುವರು.<br>ಉದಾ: ಕಾಯಗಳ ಚಲನೆಗೆ ಬಲವು ಕಾರಣವಾಗುತ್ತದೆ. | ದಿನ-24.<br>1.ಆಟ ಆಡೋಣ.<br>2.ವಿಡಿಯೋ ವೀಕ್ಷಣೆ<br>3.ಚಿತ್ರಪಟ ವೀಕ್ಷಣೆ<br><br>ದಿನ-25.<br>1.ವಸ್ತುಗಳ ಮೇಲೆ ಒತ್ತಡದ ಪರಿಣಾಮ ಕುರಿತ ಪ್ರಯೋಗಗಳು<br>2.ಗುಂಪು ಚರ್ಚೆ<br>3.ವಿಡಿಯೋ ಪ್ರದರ್ಶನ<br>4.ಚಿತ್ರಪಟ ವೀಕ್ಷಣೆ | ಚೆಂಡನ್ನು ಹಿಡಿಯುವ ಆಟ ,Football ಆಟವಾಡಿಸುವುದರ ಮೂಲಕ ಬಲದ ಪರಿಣಾಮಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ ವಿವರಿಸೋಣ.<br><br>1. ಸಿರಿಂಜ್ ನಲ್ಲಿರುವ ಗಾಳಿಯನ್ನು ಕುಗ್ಗಿಸುವ ಪ್ರಯೋಗ.ಸೈಕಲ್ ಟ್ಯೂಬ್ ನಲ್ಲಿ ಗಾಳಿಯನ್ನು ತುಂಬುವ ಪ್ರಯೋಗ.ಊದಿದ ಬಲೂನಿನ ಮೇಲೆ ಎರಡು ಅಂಗೈಯಿಂದ ವಿರುದ್ಧ ದಿಕ್ಕಿನಲ್ಲಿ ಒತ್ತಡ ಉಂಟುಮಾಡಿ ಆಕಾರ ವೀಕ್ಷಿಸುವುದರ |

| | | | |
|---|---|---|---|
| | | | ಮೂಲಕ ವಸ್ತುಗಳ ಮೇಲೆ ಒತ್ತಡದ ಪರಿಣಾಮವನ್ನು ಕುರಿತು ವಿದ್ಯಾರ್ಥಿ ಗಳೊಂದಿಗೆ ಚರ್ಚಿಸಿ.ವೀಡಿಯೋ,ಚಿತ್ರಪಟ ಅಥವಾ ಪಿಪಿಟಿಗಳನ್ನು ವಿದ್ಯಾರ್ಥಿಗಳು ವೀಕ್ಷಿಸಲು ಅವಕಾಶ ಒದಗಿಸಿ ಮತ್ತು ಸೂಕ್ತ ರೀತಿಯಲ್ಲಿ ಚರ್ಚಿಸೋಣ. |
| 9.ಶಬ್ದ ,ಉತ್ಪತ್ತಿ,ಪ್ರಸರಣ ಕ್ಕೆ ಮಾಧ್ಯಮದ ಅವಶ್ಯಕತೆಯನ್ನು ಮತ್ತು ಶಬ್ದ ಮಾಲಿನ್ಯದ ಪರಿಣಾಮ ಅರಿಯುವರು. | 22. ಶಬ್ದವನ್ನು ಅರ್ಥೈಸುವುದು ,ಶಬ್ದ ಉತ್ಪತ್ತಿಗೆ ಕಾರಣ ತಿಳಿಯುವುದು. | ದಿನ-26.<br>1.ಶಬ್ದವು ಶಕ್ತಿಯೇ ?ಪ್ರತ್ಯಕ್ಷ ವೀಕ್ಷಣೆ.<br><br>2.ಶಬ್ದ ಉತ್ಪತ್ತಿ ಮಾಡಿ ನೋಡು<br>3.ಶಬ್ದದ ದಲ್ಲಿ ಬಲವಿದೆಯೇ? ಪರೀಕ್ಷಿಸು | ಧ್ವನಿ ಉತ್ಪತ್ತಿಯಾಗುತ್ತಿರುವ ದೊಡ್ಡದಾದ ಧ್ವನಿವರ್ಧಕದ ಮುಂದೆ ಚಿಕ್ಕದಾದ ಕಾಗದದ ಚೂರುಗಳನ್ನು ಹಾಕಿ ಅವುಗಳ ಚಲನೆಯನ್ನು ತೋರಿಸಿ ಶಬ್ದವು ಶಕ್ತಿಯ ಒಂದು ರೂಪವೆಂದು ಅರ್ಥೈಸೋಣ.<br>ಗಾಳಿ ಊದಿದ ಬಲೂನನ್ನು ಹೊಡೆಯುವ ಆಟ ಆಡಿಸುತ್ತಾ,ಶಬ್ದದ ಉತ್ಪತ್ತಿಗೆ ಕಾರಣ ತಿಳಿಸೋಣ. |
| | 23.ಶಬ್ದ ಪ್ರಸರಣಕ್ಕೆ ಮಾಧ್ಯಮದ ಅವಶ್ಯಕತೆಯ ಪ್ರಯೋಗವನ್ನು ವಿವರಿಸುವರು. | ದಿನ-27.<br>1.ಶಬ್ದವು ಕೇಳಿಸಲು ಸಹಾಯ ಮಾಡುವವರು ಯಾರು ?<br>2.ಪ್ರತ್ಯಕ್ಷ ವೀಕ್ಷಣೆ ಮತ್ತು ಚರ್ಚೆ. | ಶಾಲಾ ಗಂಟೆಯನ್ನು ಬಾರಿಸುವುದು ಮತ್ತು ಶಬ್ದ ಎಲ್ಲಾ ಮಕ್ಕಳಿಗೆ ಕೇಳಿಸಲು ಕಾರಣದ ಕುರಿತು ಚರ್ಚಿಸೋಣ.<br>ಲ್ಯಾಂಡ್ ಫೋನ್ ನಲ್ಲಿ ಶಬ್ದದ ಪ್ರಸರಣದ ವಿಧಾನವನ್ನು ಕುರಿತು ಚರ್ಚಿಸೋಣ.<br>ವೀಡಿಯೋ,ಚಿತ್ರಪಟ ಅಥವಾ ಪಿಪಿಟಿ ಗಳನ್ನು ಉಪಯೋಗಿಸಿ ಶಬ್ದ ಪ್ರಸರಣ ವಿಧಾನಗಳನ್ನು ತಿಳಿಸೋಣ. |
| | 24. ಶಬ್ದ ಮಾಲಿನ್ಯದ ಪರಿಣಾಮಗಳನ್ನು ವಿಶ್ಲೇಷಣೆ ಮಾಡುವರು. | ದಿನ-28.<br>1.ವೀಕ್ಷಣೆ ಮತ್ತು ಸ್ಥಳ ಭೇಟಿ.<br>2.ವೀಡಿಯೋ ವೀಕ್ಷಣೆ<br>3.ಚಿತ್ರಪಟ ಅಥವಾ ಪಿಪಿಟಿ ವೀಕ್ಷಣೆ | ಆಸ್ಪತ್ರೆಯ ಮುಂದೆ ಮತ್ತು ಒಳಗೆ 'ಶಾಂತತೆಯನ್ನು ಕಾಪಾಡಿ' ಈ ರೀತಿಯ ಸೂಚನಾ ಫಲಕಗಳನ್ನು ಹಾಕಿರುವುದನ್ನು ನೆನಪಿಸಿ, ಕಾರಣವನ್ನು ಚರ್ಚಿಸೋಣ.<br>ವೀಡಿಯೋ,ಚಿತ್ರಪಟ ಅಥವಾ ಪಿಪಿಟಿಗಳನ್ನು ವಿದ್ಯಾರ್ಥಿಗಳು ವೀಕ್ಷಿಸಲು ಅನುಕೂಲಿಸಿ ಮತ್ತು ಅವರೊಂದಿಗೆ ಚರ್ಚಿಸುತ್ತಾ ಕಲಿಕೆಯಲ್ಲಿ ತೊಡಗಿಸೋಣ. |

| | | | |
|---|---|---|---|
| 10.ಕೆಲಸದ ಅರ್ಥ, ಶಕ್ತಿ ಸಂರಕ್ಷಣೆಯ ನಿಯಮವನ್ನು ವಿವರಿಸುವರು. | 25. ಕೆಲಸವನ್ನು ಅರ್ಥೈಸುವುದು ಮತ್ತು ಶಕ್ತಿ ಸಂರಕ್ಷಣೆಯ ನಿಯಮವನ್ನು ತಿಳಿಯುವುದು. | ದಿನ-29.<br>1.ಪ್ರಾಯೋಗಿಕ ಚಟುವಟಿಕೆ<br>2.ವಿಡಿಯೋ ವೀಕ್ಷಣೆ<br>3.ಚರ್ಚೆ & ವಿಶ್ಲೇಷಣೆ<br><br>ದಿನ-30.<br>1.ಪ್ರಾಯೋಗಿಕ ಚಟುವಟಿಕೆ<br>2. ವಿಡಿಯೋ ವೀಕ್ಷಣೆ<br>3.ಚರ್ಚೆ & ಸಮಸ್ಯಾ ಪರಿಹಾರ ಚಟುವಟಿಕೆ | ಒಂದು ಮೇಜಿನ ಮೇಲಿರುವ ಪುಸ್ತಕವನ್ನು ಮೇಲೆತ್ತಲು ತಿಳಿಸಿ.ಒಂದು ಮಗುವನ್ನು ಶಾಲಾ ಕೊಠಡಿಯ ಗೋಡೆಯನ್ನು ತಳ್ಳಲು ಹೇಳುವುದು.ಈ ಉದಾಹರಣೆಗಳೊಂದಿಗೆ ಕೆಲಸವಾದ ಮತ್ತು ಕೆಲಸವಾಗದ ಸಂದರ್ಭವನ್ನು ಚರ್ಚಿಸಿ ಕೆಲಸದ ಅರ್ಥವನ್ನು ತಿಳಿಸೋಣ .<br><br>ನಾವು ಬೈಸಿಕಲ್ ಚಾಲನೆಯನ್ನು ಮಾಡುವಾಗ ಬಳಕೆಯಾಗುವ ನಮ್ಮ ಸ್ನಾಯು ಶಕ್ತಿಯು ಯಾವ ರೂಪದ ಶಕ್ತಿಯಾಗಿ ಬದಲಾಗುತ್ತದೆ.ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ. ಒಂದು ರೂಪದ ಶಕ್ತಿಯು ಮತ್ತೊಂದು ರೂಪದ ಶಕ್ತಿಯಾಗಿ ಪರಿವರ್ತನೆಯಾಗುವ ಸಂದರ್ಭಗಳನ್ನು ಪಟ್ಟಿಮಾಡಿಸುತ್ತಾ ವಿವರಿಸೋಣ. |